# ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 17 ಇಎಸ್‌ಟಿ(1)ಬಿ 2011-12

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 18.09.2013.

## ಸುತ್ತೋಲೆ

ವಿಷಯ: ಸರ್ಕಾರಿ ಸೇವೆಗೆ ಸೇರುವ ಮುನ್ನವೇ ಸ್ನಾತಕೋತ್ತರ ಪದವಿ ಪಡೆದ ಉಪನ್ಯಾಸಕರಿಗೆ ಎರಡು ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಬಗ್ಗೆ.

* - * - *

ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರು ಸೇವೆಗೆ ಸೇರುವ ಮುನ್ನವೇ ಎಂ.ಇ, ಎಂ.ಟೆಕ್, ಎಂ.ಫಿಲ್/ಪಿಹೆಚ್‌ಡಿ ಪದವಿ ಪಡೆದವರಿಗೆ ಎಐಸಿಟಿಇ 6ನೇ ವೇತನ ಶ್ರೇಣಿಯಲ್ಲಿ ಮುಂಗಡ ವೇತನ ಮಂಜೂರಾತಿಗಾಗಿ ಸಂಬಂಧಪಟ್ಟ ಪ್ರಿನ್ಸಿಪಾಲರುಗಳಿಂದ ನಿರ್ದೇಶನಾಲಯಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಲಾಗುತ್ತಿದ್ದು, ಈ ಹಿಂದೆ ಎಐಸಿಟಿಇ ವೇತನಶ್ರೇಣಿಯಲ್ಲಿ ಈಗಾಗಲೇ ಸದರಿ ಸೌಲಭ್ಯವನ್ನು ಪಡೆದಿರುವ ಬಗ್ಗೆ ಪ್ರಸ್ತಾಪಿಸಿರುವುದಿಲ್ಲ. ಈ ಹಿಂದೆ ಸದರಿ ಸೌಲಭ್ಯವನ್ನು ಪಡೆದಿರುವ ಉಪನ್ಯಾಸಕರುಗಳೂ ಸಹ ಎಐಸಿಟಿಇ 6ನೇ ವೇತನ ಶ್ರೇಣಿಯಡಿಯಲ್ಲಿ ಮತ್ತೊಮ್ಮೆ ಮಂಜೂರಾತಿಗಾಗಿ ಕೆಲವೊಂದು ಪ್ರಿನ್ಸಿಪಾಲರುಗಳಿಂದ ಪ್ರಸ್ತಾವನೆ ಕಳುಹಿಸುತ್ತಿರುವುದಾಗಿ ಕಂಡುಬಂದಿರುತ್ತದೆ. ಆದುದರಿಂದ ಸದರಿ ವಿಷಯವಾಗಿ ಈಗಾಗಲೇ ನಿರ್ದೇಶನಾಲಯಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುವ ಸಂಸ್ಥೆಯ ಪ್ರಿನ್ಸಿಪಾಲರುಗಳು ಸಂಬಂಧಪಟ್ಟ ಉಪನ್ಯಾಸಕರ ಸೇವಾಪುಸ್ತಕ ಮತ್ತು ಇನ್ನಿತರ ದಾಖಲಾತಿಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿ ಒಂದು ವಾರದೊಳಗಾಗಿ ವರದಿಯನ್ನು ಸಲ್ಲಿಸುವಂತೆ ತಿಳಿಸಲಾಗಿದೆ.

ಇದಲ್ಲದೆ, ಕೆಲವೊಂದು ಸಂಸ್ಥೆಯ ಪ್ರಿನ್ಸಿಪಾಲರುಗಳು ಸದರಿ ಹೆಚ್ಚುವರಿ ಮುಂಗಡ ವೇತನವನ್ನು ತಮ್ಮ ಹಂತದಲ್ಲಿಯೇ ಮಂಜೂರು ಮಾಡಿರುವುದಾಗಿ ತಿಳಿದು ಬಂದಿರುತ್ತದೆ. ಪ್ರಿನ್ಸಿಪಾಲರ ಹಂತದಲ್ಲಿ ಹೆಚ್ಚುವರಿ ವೇತನವನ್ನು ಮಂಜೂರು ಮಾಡಲು ಅಧಿಕಾರವಿಲ್ಲದೇ ಇರುವುದರಿಂದ ನಿರ್ದೇಶನಾಲಯದಿಂದಲೇ ಮಂಜೂರಾತಿ ಪಡೆಯಬೇಕಾಗಿರುತ್ತದೆ. ಒಂದು ವೇಳೆ, ಪ್ರಿನ್ಸಿಪಾಲರ ಹಂತದಲ್ಲಿಯೇ ಮಂಜೂರಾತಿ ನೀಡಿದ್ದಲ್ಲಿ ಸಂಬಂಧಪಟ್ಟ ಆದೇಶದೊಂದಿಗೆ ವಿವರಣೆಯನ್ನು ನೀಡುವಂತೆ ತಿಳಿಸಲಾಗಿದೆ.

ಆಡಳಿತಾಧಿಕಾರಿ.

ಇವರಿಗೆ,

1. ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರಿಗೆ-ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಸಹ ನಿರ್ದೇಶಕರು (ಸಿಡಿಸಿ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು-ಇವರ ಮಾಹಿತಿಗಾಗಿ.

Rk-E-1(B)-Memo